# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ –145ರ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಹೊಂಬೇಗೌಡನಗರ ವಾರ್ಡ್–145 ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಶ್ರೀಮತಿ. ಲಕ್ಷ್ಮೀದೇವಿ ಆರ್. ಉಪ ಆಯುಕ್ತರು ಕಂದಾಯ (ದಕ್ಷಿಣ), ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆ ಮೇರೆಗೆ ದಿನಾಂಕ:06/09/2021 ರಂದು ಸೋಮವಾರ ಮಧ್ಯಾಹ್ನ 3.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸದಸ್ಯರಿಗೆ ಆಹ್ವಾನ ನೀಡಿದ್ದು, ಸಭೆಗೆ ಹಾಜರಾಗಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀಮತಿ. ಲಕ್ಷ್ಮೀದೇವಿ ರವರ ಅಧ್ಯಕ್ಷತೆಯೊಂದಿಗೆ ಸಭೆಯನ್ನು ನಡೆಸಲಾಯಿತು.

ಹಾಜರಿದ್ದವರು:–

1. ಉಪ ಆಯುಕ್ತರು (ದಕ್ಷಿಣ) ಹಾಗೂ ವಾರ್ಡ್ 145ರ ನೋಡಲ್ ಅಧಿಕಾರಿ.
2. ಸಹಾಯಕ ಅಭಿಯಂತರರು, ವಾರ್ಡ್–145.
3. ಕಿರಿಯ ಅಭಿಯಂತರರು, ವಿದ್ಯುತ್ (ದಕ್ಷಿಣ)
4. ಕಿರಿಯ ಇಂಜಿನಿಯರ್ (ಬೆಸ್ಕಾಂ)
5. ಪೊಲೀಸ್ ಇಲಾಖೆ ಅಧಿಕಾರಿಗಳು (ಕಾನೂನು ಸುವ್ಯವಸ್ಥೆ ಹಾಗೂ ಸಂಚಾರ) ವಿಲ್ಸನ್‌ಗಾರ್ಡನ್
6. ಅರಣ್ಯ ಇಲಾಖೆ, ಬಿಬಿಎಂಪಿ ಅಧಿಕಾರಿಗಳು ವಾರ್ಡ್ 145.
7. ತೋಟಗಾರಿಕೆ ಇಲಾಖೆ, ಬಿಬಿಎಂಪಿ ಅಧಿಕಾರಿಗಳು ವಾರ್ಡ್ 145
8. ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–145.
9. ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್–145.
10. ನಾಗರೀಕ ಕಲ್ಯಾಣ ಸಂಘದ ಸದಸ್ಯರು ಮತ್ತು ಸಾರ್ವಜನಿಕರು.

ಸಭೆಗೆ ಗೈರು ಹಾಜರಾದ ಇಲಾಖೆಗಳು:–

1. ಆಡುಗೋಡಿ ಪೊಲೀಸ್ ಠಾಣೆ ಕಾನೂನು ಸುವ್ಯವಸ್ಥೆ ಮತ್ತು ಸಂಚಾರ ವಾರ್ಡ್ 145.
2. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇಲಾಖೆಯ ಅಧಿಕಾರಿಗಳು.

*********



Scanned with CamScanner

1. ವಾರ್ಡ್ ವ್ಯಾಪ್ತಿಯಲ್ಲಿ ಕತ್ತರಿಸಿದ ಮರಗಳ ಭಾಗಗಳು ಹಲವು ಕಡೆ ಬಿದ್ದಿದ್ದು ಯಾವ ಇಲಾಖೆಯಿಂದ ತೆರವುಗೊಳಿಸಬೇಕು ಎಂಬ ವಿಷಯದ ಬಗ್ಗೆ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಪ್ರಶ್ನಿಸಿದರು – ಮರದ ದಿಮ್ಮಿಗಳನ್ನು ಅರಣ್ಯ ವಿಭಾಗದಿಂದ ತೆರವುಗೊಳಿಸಲಾಗುವುದು. ಎಲೆಯ ಭಾಗಗಳನ್ನು ಆರೋಗ್ಯ (Garbage) ವಿಭಾಗದಿಂದ ತೆರವುಗೊಳಿಸಲಾಗುವುದು ಎಂದು ಸಭೆಯಲ್ಲಿ ತಿಳಿಸಲಾಯಿತು.

2. ವಾರ್ಡ್‌ನ ಆನೆ ಪಾರ್ಕ್‌ನಲ್ಲಿ ಬಿದ್ದಿರುವ ಬಿದಿರಿನ ಮರಗಳನ್ನು ತೆರವುಗೊಳಿಸಲು ತೋಟಗಾರಿಕೆ ವಿಭಾಗಕ್ಕೆ ಸೂಚಿಸಲಾಯಿತು.

3. ವಿಲ್ಸನ್‌ಗಾರ್ಡನ್‌ನಲ್ಲಿರುವ ನರ್ಮದಾ ಸ್ಕೂಲ್ ಪಕ್ಕದಲ್ಲಿ ಮಳೆ ಬಂದಾಗ ನೀರುವ ನಿಲ್ಲುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು. ವಾರ್ಡಿನ ಸಹಾಯಕ ಇಂಜಿನಿಯರ್ ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

4. ವಾರ್ಡ್‌ನ ವ್ಯಾಪ್ತಿಯಲ್ಲಿ ಕಾವೇರಿ ನೀರು ಸರಿಯಾದ ಸಮಯಕ್ಕೆ ಹಾಗೂ ಸಮರ್ಪಕವಾಗಿ ಬರುತ್ತಿಲ್ಲವೆಂದು ವಾರ್ಡಿನ ನಾಗರೀಕರು ಸಭೆಗೆ ತಿಳಿಸಿದರು. BWSSB ಅಧಿಕಾರಿಗಳು ಸಭೆಗೆ ಗೈರುಹಾಜರಾಗಿರುವುದರಿಂದ ಸದರಿ ವಿಷಯದ ಬಗ್ಗೆ BWSSB ಇಲಾಖೆಗೆ ಕ್ರಮ ಕೈಗೊಳ್ಳಲು ಕೋರಲಾಗುವುದು ಎಂದು ಅಧ್ಯಕ್ಷರು ಸಭೆಗೆ ತಿಳಿಸಿದರು.

5. ವಾರ್ಡಿನ ಆರೋಗ್ಯ ಕೇಂದ್ರದಲ್ಲಿ ಕೋವಿಡ್–19 ವ್ಯಾಕ್ಸಿನೇಷನ್ ನಡೆಯುತ್ತಿದ್ದು, ಸದರಿ ಸ್ಥಳವು ತುಂಬಾ ಕಿರಿದಾಗಿದ್ದು, ವ್ಯಾಕ್ಸಿನೇಷನ್ ಕಾರ್ಯಕ್ರಮವನ್ನು ನೇತಾಜಿ ಶಾಲೆಗೆ ಸ್ಥಳಾಂತರಿಸಲಾಗುವುದು ಎಂದು ಸಭೆಗೆ ತಿಳಿಸಲಾಯಿತು.

6. ವಾರ್ಡಿನ ಚಿನ್ನಯ್ಯನಪಾಳ್ಯ ಪ್ರದೇಶದ ಹರಿಲಕ್ಷ್ಮಿ ಥಿಯೇಟರ್ ಸಮಸ್ಯೆ ಬಗ್ಗೆ ಚರ್ಚಿಸಲಾಯಿತು. ಅಧ್ಯಕ್ಷರು ಮಾತನಾಡಿ ಸದರಿ ಸ್ವತ್ತಿನ ಎಲ್ಲಾ ಮಾಲೀಕರ ವಿವರಗಳನ್ನು ಕಲೆಹಾಕಿದ್ದು, ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು.

7. ವಾರ್ಡ್ ವ್ಯಾಪ್ತಿಯಲ್ಲಿ ಕಸವನ್ನು ಪಡೆಯಲು ಸರಿಯಾದ ಸಮಯಕ್ಕೆ ಗಾಡಿಗಳು ಬರುತ್ತಿಲ್ಲವೆಂದು ನಾಗರೀಕರು ಸಭೆಗೆ ತಿಳಿಸಿದರು. ಸಂಬಂಧಿಸಿದಂತೆ ಕಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಗುತ್ತಿಗೆದಾರರು ಮಾತನಾಡಿ ಕಸ ಸರಿಯಾಗಿ ವಿಲೇವಾರಿಯಾಗದೇ ಸಮಸ್ಯೆಯಾಗಿದೆ. ಎರಡು ದಿನಗಳಲ್ಲಿ ಸರಿಪಡಿಸಲಾಗುವುದು ಎಂದು ಸಭೆಗೆ ತಿಳಿಸಿದರು.

8. ವಾರ್ಡ್ ವ್ಯಾಪ್ತಿಯಲ್ಲಿ ಅನಧಿಕೃತ ಹಸುಗಳು ಹಾಗೂ ಬೀದಿ ನಾಯಿಗಳು ತುಂಬಾ ಹೆಚ್ಚಾಗಿದೆ ಎಂದು ಸಭೆಗೆ ತಿಳಿಸಿದರು. ಅಧ್ಯಕ್ಷರು ಮಾತನಾಡಿ ಪಶುಪಾಲನಾ ಪರಿವೀಕ್ಷಕರಿಗೆ ಈ ಬಗ್ಗೆ ಪತ್ರ ಬರೆದು ಕ್ರಮ ಕೈಗೊಳ್ಳಲು ಕೋರಲಾಗುವುದು ಎಂದು ಸಭೆಗೆ ತಿಳಿಸಿದರು.



Scanned with CamScanner

9. ಹರಿಲಕ್ಷ್ಮಿ ಥಿಯೇಟರ್ ಹಾಗೂ ವಿಲ್ಸನ್‌ಗಾರ್ಡನ್ 11ನೇ ಅಡ್ಡರಸ್ತೆಯಲ್ಲಿ ಇರುವ ಬ್ಲಾಕ್ ಸ್ಪಾಟ್ ತೆರವುಗೊಳಿಸಲು ಆರೋಗ್ಯ ಇಲಾಖೆಯೊಂದಿಗೆ ಮಾರ್ಶಲ್‌ಗಳನ್ನು ನಿಯೋಜಿಸಲು ಸಾರ್ವಜನಿಕರು ಕೋರಿದರು. ಸದ್ಯಕ್ಕೆ ಮಾರ್ಶಲ್‌ಗಳನ್ನು ಕೋವಿಡ್-19ರ ಕಾರ್ಯಕ್ಕೆ ನಿಯೋಜಿಸಲಾಗಿರುತ್ತದೆ, ಸಂಬಂಧಿಸಿದಂತೆ ಕ್ರಮ ಕೈಗೊಳ್ಳುವುದಾಗಿ ಅಧ್ಯಕ್ಷರು ಸಭೆಗೆ ತಿಳಿಸಿದರು.

10. ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳು ಸರಿಯಾಗಿ ಉರಿಯುತ್ತಿಲ್ಲ ಎಂದು ದೂರಿದರು. ಕಿರಿಯ ಇಂಜಿನಿಯರ್ (ವಿದ್ಯುತ್) ರವರು ಮಾತನಾಡಿ ಈಗಾಗಲೇ Global Tender ಪ್ರಗತಿಯಲ್ಲಿದ್ದು, ಶೀಘ್ರವಾಗಿ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

11. ವಾರ್ಡ್ ವ್ಯಾಪ್ತಿಯಲ್ಲಿ ಕಾಮಗಾರಿ ಕೈಗೊಳ್ಳಲು ಈ ಕೆಳಗಿನಂತೆ ಅನುದಾನ ನೀಡಿದ್ದು, ಅಂದಾಜು ಪಟ್ಟಿ ತಯಾರಿಸುವ ಬಗ್ಗೆ ಸಭೆಗೆ ತಿಳಿಸಲಾಯಿತು.

   i. Annual Maintenance of Borewells and Water supply pipe lines in Ward Jurisdiction in ward No.145-Hombegowdanagara. (ಸದರಿ ಕಾಮಗಾರಿಯನ್ನು ವಾರ್ಡ್ ವ್ಯಾಪ್ತಿಯ ಚಿನ್ನಯ್ಯನಪಾಳ್ಯ, ನಾರಾಯಣಪುರ, ಸುಧಾಮನಗರದಲ್ಲಿ ಕೈಗೊಳ್ಳಲಾಗುವುದು).

   ii. Maintenance of footpaths, drain and Re-asphalting of damages roads in Ward Jurisdiction in Ward No 145 - Hombegowdanagara. (ಸದರಿ ಕಾಮಗಾರಿಯನ್ನು ಸುಧಾಮನಗರದ 6ನೇ, 7ನೇ ಹಾಗೂ 8ನೇ ಅಡ್ಡರಸ್ತೆಗಳ ಚರಂಡಿಗಳಲ್ಲಿ ಹೂಳು ತುಂಬಿದ್ದು, ಮಳೆಗಾಲದಲ್ಲಿ ಹಲವಾರು ಬಾರಿ ಸದರಿ ಪ್ರದೇಶದಲ್ಲಿ ನೀರು ನಿಂತು ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿರುವುದರಿಂದ ಸದರಿ ಕಾಮಗಾರಿಯನ್ನು ಕೈಗೊಳ್ಳಲಾಗಿರುತ್ತದೆ).

   iii. Filling of Potholes in ward Jurisdiction in Ward No 145-Hombegowdanagara. (ಸದರಿ ಕಾಮಗಾರಿಯನ್ನು ವಾರ್ಡ್ ವ್ಯಾಪ್ತಿಯಲ್ಲಿ ಆಗಾಗ್ಗೆ ಬೀಳುವ ರಸ್ತೆ ಗುಂಡಿಗಳನ್ನು ನಿರ್ವಹಿಸಲು ಕ್ರಮ ಕೈಗೊಳ್ಳಲಾಗುತ್ತದೆ).

12. ವಾರ್ಡ್ ವ್ಯಾಪ್ತಿಯಲ್ಲಿ ಸೊಳ್ಳೆಗಳಿಗೆ ಔಷದಿ ಸಿಂಪಡಿಸಲು ಕೋರಿದರು. ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಪ್ರತಿದಿನ ನಿಗಧಿತ ಔಷದಿಯನ್ನು ನೀಡುತ್ತಿದ್ದು, ವಾರ್ಡ್‌ನ ಆಯ್ದ ಭಾಗಗಳಲ್ಲಿ ಪ್ರತಿದಿನ ಸಿಂಪಡಿಸಲಾಗುತ್ತಿದೆ ಎಂದು ತಿಳಿಸಿದರು.



Scanned with CamScanner